# 100 ಉಚಿತ ಹೆರಿಗೆ ಸೇವೆಗೆ ನಿರ್ಧಾರ

## ಪ್ರಭುನೀಲಕಂಠ ಸ್ವಾಮೀಜಿ ಮಾಹಿತಿ | ಮಾತೃ ವಾತ್ಸಲ್ಯ ಕಾರ್ಯಕ್ರಮ ಲೋಕಾರ್ಪಣೆ | ಶ್ರೀಗಳ 32ನೇ ಜನ್ಮದಿನಾಚರಣೆ

■ **ವಿಕ ಸುದ್ದಿಲೋಕ** ಬೈಲಹೊಂಗಲ



ಪ್ರಭುನೀಲಕಂಠ ಸ್ವಾಮೀಜಿ

ಇಲ್ಲಿನ ಶ್ರೀ ನೀಲಕಂಠೇಶ್ವರ ವಿದ್ಯಾವರ್ಧಕ ಸಂಸ್ಥೆಯ ಎಸ್.ಜಿ.ವಿ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಹಾಗೂ ಎಸ್.ಜಿ.ವಿ.ಈಶಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಅ. 14ರಿಂದ 2026ರ ಫೆಬ್ರವರಿ 26ರವರೆಗೆ ಒಟ್ಟು 100 ಉಚಿತ ಹೆರಿಗೆ ಸೇವೆ ಮಾಡಲಾಗುವುದು ಎಂದು ಮೂರುಸಾವಿರ ಮಠದ ಪೀಠಾಧಿಪತಿ ಶ್ರೀ ಪ್ರಭುನೀಲಕಂಠ ಸ್ವಾಮೀಜಿ ಹೇಳಿದರು.

ಪಟ್ಟಣದ ಮೂರುಸಾವಿರ ಮಠದಲ್ಲಿ ಮಂಗಳವಾರ ಶ್ರೀಗಳ 32ನೇ ಜನ್ಮದಿನ ನಿಮಿತ್ತ ನಡೆದ ಮಾತೃ ವಾತ್ಸಲ್ಯ ಕಾರ್ಯಕ್ರಮ ಲೋಕಾರ್ಪಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. "ನಮ್ಮ ಶಿಕ್ಷಣ ಸಂಸ್ಥೆಯಿಂದ ಸಮಾಜಕ್ಕೆ ಕೊಡುಗೆ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರಿಂದ ಬಡವರಿಗೆ, ಮಧ್ಯಮ ವರ್ಗದ ಜನರಿಗೆ ಅನುಕೂಲವಾಗುತ್ತದೆ," ಎಂದರು.

"ಸುರಕ್ಷಿತ ಹೆರಿಗೆ, ಆರೋಗ್ಯಕರ ತಾಯಿ ಮತ್ತು ಮಗು ಎಂಬ ತತ್ವದಡಿ ಕಾಳಜಿಪೂರ್ವಕವಾಗಿ ವೈದ್ಯರ ತಂಡ ಹೆರಿಗೆ ಸೇವೆ ಮಾಡಲಿದೆ. ಈ ನಮ್ಮ ಆಸ್ಪತ್ರೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಬೆಂಗಳೂರು ಹಾಗೂ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗದಿಂದ ಮಾನ್ಯತೆ ಪಡೆದಿದೆ," ಎಂದು ತಿಳಿಸಿದರು.

ಚಿತ್ರನಟ ಶಿವರಂಜನ್ ಬೋಳಣ್ಣವರ ಮಾತನಾಡಿ, "ಸ್ವಾಮೀಜಿಗಳ ಜನ್ಮದಿನ ನಿಮಿತ್ತ ಹಮ್ಮಿಕೊಂಡ ಉಚಿತ ಹೆರಿಗೆ ಸೇವೆ ಶ್ಲಾಘನೀಯ," ಎಂದು ಬಣ್ಣಿಸಿದರು.

ಪ್ರಾಂಶುಪಾಲ ಡಾ.ಸುಭಾಸ ಬಾಗಡೆ, ಮುಖ್ಯ ವೈದ್ಯಾಧಿಕಾರಿ ಡಾ.ನಾಗೇಂದ್ರ ಪಾಟೀಲ ಮಾತನಾಡಿ, "ಪಟ್ಟಣದ ಧಾರವಾಡ ಬೈಪಾಸ್ ರಸ್ತೆಯಲ್ಲಿರುವ ಎಸ್.ಜಿ.ವಿ.ಈಶಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮಾತೃ ವಾತ್ಸಲ್ಯ ಹಮ್ಮಿಕೊಳ್ಳಲಾಗಿದೆ. ಲಾಭ ಪಡೆಯಲು ಇಚ್ಛೆಯುಳ್ಳ ಗರ್ಭಿಣಿಯರು ಆಸ್ಪತ್ರೆಯಲ್ಲಿ ಹೆಸರು ನೋಂದಾಯಿಸಿ ವೈದ್ಯರ ಸಲಹೆ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ಮೊ.8197504459, ದೂ.08288-200477 ಸಂಪರ್ಕಿಸಬೇಕು," ಎಂದರು.

ಮುನವಳ್ಳಿಯ ಸೋಮಶೇಖರ ಮಠದ ಮುರುಘೇಂದ್ರ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ವಿಶ್ವನಾಥ ಹಿರೇಮಠ, ಅನಿಲ ಮೆಟಗುಡ್ಡ, ಎಸ್‌ಎನ್‌ವಿವಿಎಸ್ ಸಂಸ್ಥೆ ನಿರ್ದೇಶಕರಾದ ವಿರೂಪಾಕ್ಷ ಕೋರಿಮಠ, ವಿ.ಕೆ.ಬಡಿಗೇರ, ಬಿ.ಎಸ್.ಗುರಣ್ಣವರ, ಸಿ.ಎಸ್.ಕುಸಲಾಪುರ, ಆರ್.ಜಿ. ಹಿರೇಮಠ, ಎಸ್.ವಿ.ಹುಲೆಪ್ಪನವರಮಠ, ಬಿ.ಎಸ್. ಹೊಂಡೇದ, ಪಿ.ವಿ.ಪೂಜೇರ ಉಪಸ್ಥಿತರಿದ್ದರು, ಪ್ರಾಚಾರ್ಯ ಎನ್.ಎಸ್.ಚಿಲಮೂರ ನಿರೂಪಿಸಿದರು.



ಬೈಲಹೊಂಗಲದ ಮೂರುಸಾವಿರ ಮಠದಲ್ಲಿ ಮಂಗಳವಾರ ಪ್ರಭುನೀಲಕಂಠ ಶ್ರೀಗಳ ಜನ್ಮದಿನ ನಿಮಿತ್ತ ಮಾತೃ ವಾತ್ಸಲ್ಯ ಕಾರ್ಯಕ್ರಮ ಲೋಕಾರ್ಪಣೆಗೊಳಿಸಲಾಯಿತು.

### ಶ್ರೀಗಳಿಂದ ಪರಂಪರೆ ಮುಂದುವರಿಕೆ: ಭಕ್ತರ ಸಂತಸ

ಶಿಕ್ಷಣ ಹರಿಕಾರರಾಗಿದ್ದ ಲಿಂ. ಶ್ರೀ ಗಂಗಾಧರ ಮಹಾಸ್ವಾಮೀಜಿ, ಶ್ರೀಮಠ ಹಾಗೂ ಶಿಕ್ಷಣ ಸಂಸ್ಥೆಗಳ ಏಳ್ಗೆಗೆ ಶ್ರಮಿಸಿದ್ದರು. ಬೈಲಹೊಂಗಲ ನಾಡಿನ ಏಳ್ಗೆಯಲ್ಲಿ ಲಿಂ. ಗಂಗಾಧರ ಶ್ರೀಗಳ ಪಾತ್ರ ಹಿರಿದು. ಆಧ್ಯಾತ್ಮಿಕ, ಧಾರ್ಮಿಕ, ಶಿಕ್ಷಣ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದೇ ಪರಂಪರೆಯನ್ನು ಪ್ರಭುನೀಲಕಂಠ ಶ್ರೀಗಳು ಮುಂದುವರಿಸಿದ್ದಾರೆ ಎಂದು ಭಕ್ತರು ಸಂತಸ ವ್ಯಕ್ತಪಡಿಸಿದರು.

### ಶುಭಾಶಯಗಳ ಮಹಾಪೂರ

ಶ್ರೀ ಪ್ರಭುನೀಲಕಂಠ ಸ್ವಾಮೀಜಿಗಳ 32ನೇ ಜನ್ಮದಿನವನ್ನು ಸದ್ಭಕ್ತರು ಮಂಗಳವಾರ ಸಡಗರ, ಸಂಭ್ರಮದಿಂದ ಆಚರಿಸಿದರು. ಬೆಳಗ್ಗೆಯಿಂದ ತಡರಾತ್ರಿಯವರೆಗೆ ಅಪಾರ ಸಂಖ್ಯೆಯಲ್ಲಿ ಭಕ್ತರು, ನಾಗರಿಕರು, ಗಣ್ಯರು, ಮಠಾಧೀಶರು ಹಾಗೂ ಸಂಘ - ಸಂಸ್ಥೆಗಳ ಪದಾಧಿಕಾರಿಗಳು, ನಾನಾ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಶ್ರೀಮಠಕ್ಕೆ ಬಂದು ಪೂಜ್ಯರಿಗೆ ಶುಭಾಶಯ ಕೋರಿದರು. ಭಕ್ತರನ್ನು ಪೂಜ್ಯರು ಆತ್ಮೀಯತೆಯಿಂದ ಬರಮಾಡಿಕೊಂಡು ಸಿಹಿ ವಿತರಿಸಿದರು. ಜಾಲತಾಣಗಳಲ್ಲೂ ಶ್ರೀಗಳಿಗೆ ಭಕ್ತರು ಶುಭಾಶಯಗಳ ಸುರಿಮಳೆಗೈದರು.